ಕೀಕಡಾ 50ರ ಪ್ರಕಾರ ಮೊದಲನೇ ಖಿಸ್ತು ಹರಾಜು ತಾರೀಖು ಲಗಾಯಿತು 30 ದಿನಗಳೊಳಗಾಗಿ ಬಾಕೀ ಉಳಿಯುವ ಕೀಕಡಾ 25ರ ಮೇರೆ ಮೊಬಲಗ್ ಮೊದಲನೇ ಖಿಸ್ತು ಯಾವ ತಾರೀಖಿನಲ್ಲಿ ಸಲ್ಲಬೇಕಾಗ್ರ ಬರುತ್ತೋ ಆ ತಾರೀಖು ಲಗಾಯಿತು 15 ದಿನಗಳೊಳಗಾಗಿ ಈ ಮೇರೆ ಪಾವತಿ ಮಾಡಲ್ಪಡತಕ್ಕದ್ದು. ಮೇಲೆ ನಮೂದಿಸಲ್ಪಟ್ಟ ಖಿಸ್ತುಗಳ ಪ್ರಕಾರ ಬಾಕೀ ಮೊಬಲಗ್ ಕ್ರಮವಾಗಿ ಪಾವತಿ ಮಾಡಲಿಕ್ಕೆ ಖರೀದೀದಾರನು ಜಾಮೀನ್ ಕೊಡತಕ್ಕದ್ದು.

7. ಖರೀದಿ ಮೊಬಲಗ್ ಪೂರ್ತ ಪಾವತಿ ಮಾಡಿದಮೇಲೆ ಖರೀದಿ ದಾರನು ಫಸಲ್ ಕಟುವ್‌ಬಗ್ಯೆ ಅದು ತಕ್ಕ ಸ್ಥಿತಿಯಲ್ಲಿರುವದನ್ನು ಕುರಿತು ತನಿಗೆ ನೋಟಿಸ್ ಕೊಡಲ್ಪಟ್ಟ ತರುವಾಯ 10 ದಿನಗಳೊಳಗಾಗಿ ಧಾನ್ಯವನ್ನು ಸಂಪೂರ್ಣವಾಗಿ ತೆಗದುಕ್ಕೊಂಡು ಹೊಗುವಂತೆ ಅಪ್ಪಣೆ ಕೊಡಲ್ಪಡತಕ್ಕದ್ದು. ಆತನು ಹಾಂಗೆ ಮಾಡಲಿಕ್ಕೆ ತಪ್ಪಿದರೆ ರೈತರು ಫಸಲ್ ಕಟುವ ಮಾಡತಕ್ಕ ಬಗ್ಯೆ ಅಪ್ಪಣೀ ಕೊಡಲ್ಪಡತಕ್ಕದ್ದು. ಆ ಪೈಕಿ ಖರೀದೀದಾರನ ಹಿಸ್ಸೆಯು ಪುನಃ ಮಾರಲ್ಪಟ್ಟು ಹರಾಜು ಹುಟ್ಟುವಳಿಯಲ್ಲಿ ಪುನಃ ಮಾಡಿದ ಹರಾಜಿಗೆ ತಗಲಿದ್ದ ಖರ್ಚು ಜಾತಾ ಬಾಕೀ ಮೊಬಲಗನ್ನು ಸರಕಾರಕ್ಕೆ ಜಮೇ ಕಟ್ಟತಕ್ಕದ್ದು. ಧಾನ್ಯ ತೆಗದುಕ್ಕೊಂಡು ಹೋಗತಕ್ಕ ಬಗ್ಯೆ ಪಟೇಲನು ನೋಟಿಸ್ ಕೊಟ್ಟು ಅದರ ಸಮಾಚಾರವನ್ನು ಅಮಲ್ದಾರಿಗೆ ಕೊಡತಕ್ಕದ್ದು. ಸದರೀ ನೋಟಿಸ್ ಖರೀದಿ ದಾರನಮೇಲಾಗಲಿ, ಆತನ ಮುತಾಲೀಕನಮೇಲಾಗಲಿ ಫಸಲು ಕಾದುಕ್ಕೊಂಡಿರುವ ಆತನ ನೌಕರನಮೇಲಾಗಲಿ ಸಾದರ್ಮಾಡಲ್ಪಡತಕ್ಕದ್ದು. ಅಥವಾ ಫಸಲ್ ಇರುವ ಜಮೀನ್ ಸಮೀಪ ವೊಂದು ಬಹಿರಂಗವಾದ ಸ್ಥಳದಲ್ಲಿ ಚಿಕಟಾಯಿಸಲ್ಪಡ ತಕ್ಕದ್ದಲ್ಲದೆ ಮತ್ತೊಂದು ನಕಲ್ ಗ್ರಾಮದ ಬಂಡಿಗೆ ಚಿಕಟಾಯಿಸಲ್ಪಡತಕ್ಕದ್ದು.

8. ಪ್ರತಿ ಹೋಬಳಿಯಲ್ಲಿ ಹರಾಜುಗಳು ಖೈದಾದಕೂಡ್ಲೆ ಅವುಗಳ ಫಲಿತಾಂಶಗಳ ವೊಂದು ತಖ್ತೆಯು ತಾಲ್ಲೂಕಿನಲ್ಲಿ ತಯಾರ್ಮಾಡಲ್ಪಟ್ಟು ವೊಂದು ರಿಪೋರ್ಟು ಡಿಪ್ಯುಟಿ ಕಮ್ಮಿಷನರವರಿಗೆ ಕಳುಹಿಸಲ್ಪಡತಕ್ಕದ್ದು.

9. 5 ಖಂಡಗ ಬೀಜವರಿಗೆ ಜಾಸ್ತಿ ಯಿರುವ ಜಮೀನಿನ ಬಟಾಯಿ ಫಸಲುಗಳ ವಿಷಯದಲ್ಲಿ, ಅವುಗಳ ಬೆಲೆಯು ಪಂಚಾಯಿತರ ಸಹಾಯದೊಡನೆ ಅಮಲ್ದಾರ್ರಿಂದಲಾಗಲಿ, ಶಿರಸ್ತೇದಾರರಿಂದಲಾಗಲಿ, ಕ್ಷೇಪ್ತಾರರಿಂದಲಾಗಲಿ ಅಂದಾಜು ಕಟ್ಟಲ್ಪಟ್ಟು ಸದರೀ ಅಂದಾಜು B ನಮೂನೆಯಲ್ಲಿ ಡಿಪ್ಯುಟಿ ಕಮ್ಮಿಷನರ್‌ಯವರಿಗೆ ಕಳುಹಿಸಲ್ಪಡತಕ್ಕದ್ದು. ಡಿಪ್ಯುಟಿ ಕಮ್ಮಿಷನ್ನರ್‌ಯವರು, ಫಸಲಿ ಪೈಕಿ ಸರಕಾರ ಹಿಸ್ಸೆಯನ್ನು 2ರ ಲಗಾಯತು 7ರ ವರಿಗಿನ ನಿಬಂಧನೆಗಳಿಂದ ವಿಧಿಸಲ್ಪಟ್ಟ ರೀತಿಯಾಗಿ ಹರಾಜು ಮಾಡತಕ್ಕ ಬಗ್ಯೆ ಹುಕ್ಕುಂ ಕೊಡತಕ್ಕದ್ದು. ಹರಾಜು ವಾಡಿಕೆಯಾಗಿ ಅಮಲ್ದಾರರಿಂದ ನಡಿಸಲ್ಪಡತಕ್ಕದ್ದು. ಅಥವಾ ವಿಶೇಷಸಂಗತಿಗಳಲ್ಲಿ ಸಬ್ ಡಿವೀಜ್ಯ ಆಫಿಸರಿಂದಲಾಗಲಿ ಇತರ ಅಸಿಸ್ಟೆಂಟರಿಂದಲಾಗಲಿ ನಡಿಸಲ್ಪಡತಕ್ಕದ್ದು. ಎಷ್ಟು ಮೊಬಲಗಿಗೆ ಫಸಲ್ ಮಾರಲ್ಪಟ್ಟಿತೋ ಅದನ್ನು ಕುರಿತು ಒಂದು ರಿಪೋರ್ಟು ಕೂಡ್ಲೆ ಡಿಪ್ಯುಟಿ ಕಮ್ಮಿಷನ್ನರವರಿಗೆ ಕಳುಹಿಸಲ್ಪಡತಕ್ಕದ್ದು.

10. ಫಸಲ್ ಅಂದಾಜು ಕಟ್ಟತಕ್ಕ ಅಮಲ್ದಾರರು ಯಾ ಇತರ ಉದ್ಯೋಗಸ್ಥರು ಅವರು ಕಟ್ಟತಕ್ಕ ಬೆಲೆ ಸ್ವಲ್ಪ ಹೆಚ್ಚು ಕಡಮೆಯಾಗಿ ಕರಾರುವಾಕಾ ಇರತಕ್ಕ ಬಗ್ಯೆ ಜವಾಬುದಾರರಾಗಿ ಎಣಿಸಲ್ಪಡುವರೆಂದುನ್ನೂ ಅವರು ಮೇಸ ಯಾ ಬಳಸಂಚು ನಡಿಸಿದ ಸಂಗತಿಗಳಲ್ಲಿ ಅವರ ನಡತೆಯನ್ನು ಕುರಿತು ಪೂರಾ ಆಲೋಚನೆ ಮಾಡಲ್ಪಡುವದೇ ಹೊರ್ತು ಫಸಲ್ ಪುನಃ ಹರಾಜು ಆಗ ಅಪ್ಪಣೆ ಕೊಡಲ್ಪಡುವದಿಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

11. ಖುಷ್ಕಿ ಯಾ ಬಾಗಾಯತ್ ಬಟಾಯಿ ಸಾಗುವಳಿ ಇನ್ನು ಮೇಲೆ ನಡೆಯಲಿಕ್ಕೆ ಅಪ್ಪಣೆ ಕೊಡಲ್ಪಡಕೂಡದು. ಅಂತಾ ವಿಶಿಷ್ಟ ಜಮೀನ್ದಾರಿಗಳೂ ವುಳಮೆದಾರ್ರಿಗೆ ಮುನಾಸಬ್ ಬರದಮೇಲೆ ಕಂದಾಯಕ್ಕೆ ಕೊಡಲ್ಪಡತಕ್ಕದ್ದು.

12. ರಾಜೀನಾಮೇ ಕೊಡಲ್ಪಟ್ಟ ಯಾ ಬಂಜರು ಇರುವ ತರೀ ಯಾ ಖುಷ್ಕಿ ಜಮೀನ್ದಾರಿಗಳಲ್ಲಿ ಬಗರ ಹುಕ್ಕುಂ ಬಟಾಯಿ ಸಾಗುವಳೀ ಮಾಡಲ್ಪಟ್ಟ ಸಂಗತಿಗಳಲ್ಲಿ ಅದಕ್ಕಾಗಿ ವಿಧಿಸಲ್ಪಟ್ಟ ಜುರ್ಮಾನೆಗಳು ಶಿವಾಯಿ ಸರಿಯಾದ ಕಂದಾಯವು ಕಟ್ಟಲ್ಪಡತಕ್ಕದ್ದು.

A ನಮೂನೆ.

ಹೆಸರು.			ಸರ್ವೆ ನಂಬರ್ ಮತ್ತು ಹಿಸ್ಸೆ	ಬಟಾಯಿ ಜಮೀನ್		ಸಾಲ್ ಗುದಸ್ತೆ ಸಾಗುವಳಿ ಬೀಜವರಿ	ಪಟೇಲ್ ವ ಕೀಕದಾರನ ಷರಗಳು
ಹೋಬಳಿ	ಗ್ರಾಮ	ಕೆರೆ		ನಂಬರ್	ಬೀಜವರಿ		

B ನಮೂನೆ.

ಹೆಸರು.			ಬಟಾಯಿ ಸಾಗುವಳಿ			ಪಜಾ						
ಹೋಬ್ಳಿ	ಗ್ರಾಮ	ಕೆರೆ	ಕೆಲಿಯ ರಿಜಿಸ್ಟರ್ ನಂಬರ್.	ಜಮೀನ್ ನಂಬರ್.	ಬೀಜದನ	ಅಂದಾಜು ಜಮಾಬಂದಿಪ್ಪನ್ನ ಕೆಳಿ	ದೈವಾಧೀನ ಪಿಂಜೆನ	ನಿರಾಸ್ತಿ	ಜುಲ್ಮಾನೆ	ಬಾಕೀ ಅಫೀನಾ ಸರಕಾರ ಪಿಂಜೆನ	ಅರ್ಜ ಬಾಜಾರಿ ನಿರಕ್ಷ ಪ್ರಕಾರ ಅಂದಾಜಾ ಬಲಿ	ಸಾಲಿಗುದನ್ನೆ ಯಲ್ಲಿ ದಾಖಲೀಯಾಗಿ ಹೊಸ್ತಿದ್ದ	ದ ಪಟೇಲ್ ವ ಕೀಕದಾರನಿಂ ಷರಾ

ನಂ. 346. ತಾರೀಖು 22ನೇ ಡಿಕಂಬರ್ 18"6.

ಮುನಸೀಫರ ಇದರಡಿಬರುವ ವರ್ಗಾವರ್ಗೀಗಳು ಮಂಜೂರಾಗಿವೆ.

ಮೆಸ್ಟರ್ ಲಾರ್ಕಿನ್ಸ್ ಯವರು ಚಿತ್ರದುರ್ಗ ಡಿಸ್ಟ್ರಿಕ್ಟ್ ದಾವಣಗೆರೆ ಸಬ್ ಡಿವಿಜನ್ನಿಂದ ಮೈಸೂರು ಡಿಸ್ಟ್ರಿಕ್ಟ್ ನಂಜನಗೂಡು ಸಬ್ ಡಿವಿಜನ್ನಿಗೆ.

ಕೇಪ್ಟೈಯಂಗಾರ್ರು ಮೈಸೂರು ಡಿಸ್ಟ್ರಿಕ್ಟ್ ನಂಜನಗೂಡು ಸಬ್ ಡಿವಿಜನ್ನಿಂದ ಚಿತ್ರದುರ್ಗ ಡಿಸ್ಟ್ರಿಕ್ಟ್ ದಾವಣಗೆರೆ ಸಬ್ ಡಿವಿಜನ್ನಿಗೆ.

ನಂ. 347. ತಾರೀಖು 26ನೇ ಡಿಕಂಬರ್ 1876.

ಕೆಪ್ಟ್ ವಿಲ್ಸ್ಯಯವರು ತಮ್ಮ ಉದ್ಯೋಗ, ಅಂದರೆ ಫೀನಫೆನ್ನು ಜೊಂದಿದ ಮೈಸೂರು ಮಹಾರಾಜರಾಜಾಸಾಹೇಬರವರ ಟ್ಯೂಟರ್ ಕೆಲಸವನ್ನು, ದೆಹಲೀ ಮೊಕ್ಕಾಮಿನಲ್ಲಿ 1876ನೇ ಇಸವೀ ಡಿಕಂಬರ್ 7ನೇ ಮುಕ್ತಂನಲ್ಲಿ ಪುನಶ್ಚ ವಹಿಸಿದರು.

ನಂ. 348. ತಾರೀಖು 30ನೇ ಡಿಕಂಬರ್ 1876.

4ನೇ ಕ್ಲಾಸ್ ಡೆಪ್ಯುಟೆ ಕಮ್ಮಿಷನ್ನರ್ ಮೇಜರ್ ಮೊಟ್ಟೆಟೆಯವರು, 1876ನೇ ನವಂಬರ್ 20ನೇ ಮುಕ್ತಂ 732ನೇ ನಂಬರ್ ಗವರ್ನಮೆಂಟ್ ಜನರಲ್ ಆರ್ಡರ್‌ನಲ್ಲಿ ಕೊಡಲ್ಪಟ್ಟಿದ್ದ ಫರ್‌ಲೋ ರಜಾದಮೇಲೆ 1876ನೇ ಡಿಕಂಬರ್ 22ನೇ ಮುಕ್ತಂನಲ್ಲು ಮದರಾಸ್‌ನಿಂದ ಹೊರಟು ಸಂಗತಿಯನ್ನು ರಿಪೋರ್ಟು ಮಾಡಿದರು.

ನಂ. 349. ತಾರೀಖು 30ನೇ ಡಿಕಂಬರ್ 1876.

ಕರ್ನಲ್ ಎಂ ರಾಬರ್ಟಸ್‌ಯವರು ಮೈಸೂರಲ್ಲಿ ಸಿವಿಲ್ ಸರ್ಜನ್ ಉದ್ಯೋಗದ ಚಾರ್ಜನ್ನು 1876ನೇ ಡಿಕಂಬರ್ 15ನೇ ಮುಕ್ತಂ ಪೂರ್ವಾನ್ಹದಲ್ಲಿ ತೆಗದುಕೊಂಡರು.

ಅಪಾಥಿಕೆರಿ ಸ್ಟಾಗ್ಸ್‌ಯವರು ಡಿಕಂಬರ್ 9ರ ಲಗಾಯತು 14ರ ವರಿಗೆ ಅಪ್ಪಗ್ರಾಮ ಡಿವಿಜನ್ ಸಿವಿಲ್ ಸರ್ಜನ್ ಕೆಲಸವನ್ನು ನಿರ್ವಹಿಸಿದರು.

ನಂ. 350. ತಾರೀಖು 2ನೇ ಜನವರೀ 1877.

ಕೋಲಾರ ಡಿಸ್ಟ್ರಿಕ್ಟು ಆಫಿಷಿಯೇಟಿಂಗ್ ಡಿಪ್ಯೂಟಿ ಕಮ್ಮಿಷನರ್ ಮತ್ತು ಡಿ|| ಮಾಜಿಸ್ಟ್ರೇಟರಾದ ಮೆ|| ವೆಂಕಟವರದಯ್ಯಂಗಾರು ಸ್ ೧೮೭೨ನೇ ಇಸವಿಯ 10ನೇ ನಂಬರ್ ಆಕ್ಟಿನ 335ನೇ ಸೆಕ್ಷನ್ ನಿಯಮ ಅನುಸರಿಸಿ ಫಿರ್ಯಾದಿಗಳ ಯಾ ಸಾಕ್ಷಿಗಳ ಸಾಕ್ಷ್ಯವನ್ನು ಸ್ವದಸ್ತೂರು ಇಂಗ್ಲಿಷ್ ಭಾಷೆಯಲ್ಲಿ ತೆಗದುಕೊಳ್ಳುವಂತೆ ನೇಮಿಸಲ್ಪಟ್ಟಿರುತ್ತಾರೆ.

ನಂ. 351. ತಾರೀಖು 2ನೇ ಜನವರೀ 1877.

ಶಿವಮೊಗ್ಗಾ ಡಿಸ್ಟ್ರಿಕ್ಟು ಜುಡಿಷಿಯಲ್ ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ತಿರುಮಲಾಚಾರ್ಯರಿಗೆ ವಿಶೇಷ ಮತ್ತು ಹಂಗಾಮಿ ವಿಷಾಡು ತರೀಕ್ 1872ನೇ ಇಸವಿ 10ನೇ ನಂಬರ್ ಆಕ್ಟಿನ 19ನೇ ಸೆಕ್ಷನ್ ಅನುಸರಿಸಿ 1ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವೂ ಐಜರ್ ಆಕ್ಟಿನ 27ನೇ (a) ಸೆಕ್ಷನ್ 2, 3 ಮತ್ತು 5 ಕ್ಲಾಜಿಗಳಲ್ಲಿ ಕಂಡ ಜಾಸ್ತೀ ಅಧಿಕಾರಗಳೂ ಕೊಡಲ್ಪಟ್ಟಿರುತವೆ.

ನಂ. 352. ತಾರೀಖು 4ನೇ ಜನವರೀ 1877.

ಜೇತವಂಗಲದ ತಾಲ್ಲೂಕು ಅಮಲ್ದಾರ್ ಭಗವಂತರಾಯರು ಸ್ ೧೮೫೪ನೇ ಇಸವೀ 18ನೇ ರೈಲ್ವೇ ಆಕ್ಟು 1871ನೇ ಇಸವೀ 25ನೇ ಆಕ್ಟು ಇವುಗಳ ನಿಬಂಧನೆ ಅನುಸರಿಸಿ ತಮ್ಮ ಅಧಿಕಾರಕ್ಕೆ ವಳಪಡುವಂತಾ ಮತ್ತು ಜುಲ್ಮಾನೆಯಿಂದ ಮಾತ್ರ ಶಿಕ್ಷಿಸಲ್ಪಡತಕ್ಕ ತಕಸೀರ್‌ಗಳನ್ನು ವಿಚಾರಣೆ ಮಾಡುವದಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ. 353. ತಾರೀಖು 4ನೇ ಜನವರೀ 1877.

ಅಮಲ್ದಾರ್ ಸಯ್ಯದ್ ಅಬ್ದುಲ್‌ಖಾದರ್‌ಯವರು ವಿಶೇಷ ಕೆಲಸದ ಮೇಲೆ ಗೈರ್‌ಹಾಜರಿರುವಲ್ಲಿ ಮೈಸೂರು ಡೆಪ್ಯೂಟಿ ಕಮ್ಮಿಷನರವರ ಈಚ್ಚೇರೀ ಟ್ರಾನ್ಸ್‌ಲೇಟರ್ ಗೋಪಾಲಯ್ಯಂಗಾರ್‌ಯವರು ಬೇಲೂರು ತಾಲ್ಲೂಕು 5ನೇ ಗ್ರೇಡ್ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ವೊಕರರ್.

ನಂ. 354. ತಾರೀಖು 4ನೇ ಜನವರೀ 1877.

ಹಿಂದೆ ಕೊಡಲ್ಪಟ್ಟ ಹುಕ್ಕುಂಗಳನ್ನು ರದ್ದುಪಡಿಸಿ ಇದರಿಂದ ತಿಳಿಯಪಡಿಸುವದೇನಂದರೆ.—ಸ್ ೧೮೭೭ನೇ ಇಸವಿಯ ಫಿಬ್ರವರೀ 1ನೇ ಮುಕ್ತಂ ಲಗಾಯತು ಮತ್ತು ಆ ತರುವಾಯ ನಗರಡಿವೀರ್ಜನಲ್ಲಿ ಕಾಡುಮೃಗಗಳನ್ನು ಸಂಹಾರಮಾಡುವ ಬಗ್ಗೆ ಇನಾಂಗಳು ಇದರಡಿ ವಿವರಿಸಲ್ಪಟ್ಟ ದರಗಳ ಪ್ರಕಾರ ಕೊಡಲ್ಪಡುವದು. ರೂ.

ಹುಲಿಯನ್ನು ಕೊಲ್ಲುವದಕ್ಕೆ ಚಿರತೆಯನ್ನು ಕೊಲ್ಲುವದಕ್ಕೆ 40—0—0

ಕಿರಬು ಅಥವಾ ತೋಳವನ್ನು ಕೊಲ್ಲುವದಕ್ಕೆ 10—0—0

"ಬಮೋಜೀಬ್ ಹುಕ್ಕುಂ,"

T. CLARKE,

Offg. Secretary.

ಕೊಡಗು ಚೀಫ್ ಕಮ್ಮಿಷನರವರಿಂದ ಕೊಡೋಕಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ನಾಮೆ.

ನಂ. 13. ತಾರೀಖು ೧೬ನೇ ಡಿಸಂಬರ್ 1876.

ಈ ಕೆಳಗೆ ಬರುವ ಬೈಲಾನಿಂಥನೆಯು ಚೀಫ್ ಕಮ್ಮಿಷನರವರಿಂದ ಸಮ್ಮತಿಸಲ್ಪಟ್ಟು, ಮಂಜೂರ್ ಮಾಡಲ್ಪಟ್ಟು, ಸಕಲಜನಗಳಿಗೂ ತಿಳಿಯುವಬಗ್ಗೆ ಪ್ರಕಟನಲ ಹುತ್ತೆ.

92. ನೇ ಬೈಲಾ.—ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಜನನ ಮರಣಗಳನ್ನ ರಿಜಿಸ್ಟರ್ ಮಾಡುವ ಬಗ್ಗೆ, ಈ ಕೆಳಗೆ ಕಂಡ 6 ಡಿವಿಜ್ಞಗಳು ಮಡಿಕೆರೆ ಷಹರಿನಲ್ಲಿ ಕಲ್ಪಿಸಲ್ಪಟ್ಟಿವೆ. ಇಂತಾ ಪ್ರತಿ ಡಿವಿಜನ್ನಿಗೂ ಮ್ಯುನಿಸಿಪೆಲ್ ಜೋರ್ಡಿನವರು ಒಬ್ಬ ಮೆಂಬರನ್ನು ಮೊಕರರ್ ಮಾಡಿರುತ್ತಾರೆ. ಸದರೀ ಸರಹದ್ದುಗಳೊಳಗೆ ಸಂಭವಿಸುವ ಪ್ರತಿ ಜನನವನ್ನೂ, ಮರಣವನ್ನು, ತಿಳಿದುಕೊಂಡು ಬರೆದಿಡುವದು ಅವರ ಕೆಲಸವಾಗಿರತಕ್ಕದ್ದು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸ ಮಾಡುವ ದರೋಬಸ್ತು ಜನಗಳೂ, ತಮ್ಮ ತಮ್ಮ ಡಿವಿಜ್ಞಗಳ ಮೆಂಬರ್ಗಳಿಗೆ, ತಮ್ಮ ಕುಟುಂಬಗಳಲ್ಲಿ ಯಾ ಮನೆಗಳಲ್ಲಿ ಸಂಭವಿಸುವ ಜನನ ಮರಣಗಳನ್ನು 6 ದಿನಗಳೊಳಗಾಗಿ ರಿಪೋರ್ಟುಮಾಡತಕ್ಕದ್ದೆಂದು ತಾಕೀದ್ ಮಾಡಲ್ಪಟ್ಟಿದ್ದಾರೆ. ಯಾವ ಮನುಷ್ಯನಾಗಲಿ ಹಾಗೆ ಮಾಡುವದಕ್ಕೆ ತಪ್ಪಿದರೆ ಅವನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಪ್ರತಿ ತಪ್ಪಿಕ್ಕೂ 5 ಐದು ರೂಪಾಯಿ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬ್ರಾಹ್ಮಣ ಪೇಟೆ ದೊಡ್ಡ ಬೀದಿ ರಾಣೇ ಪೇಟೆ ಬಾನೇ ಮೊಟ್ಟೆ ಗೌಳೀ ಪೇಟೆ ಗಾರೀ ಬೀದಿ.

"ಹುಕ್ಕುಂ ಬಮೋಜೀಬ್,"

T. CLARKE,
Offg. Secretary.